೧೯೮೭-೮೮ನೇ ಸಾಲಿನ ಲೆಕ್ಕಪತ್ರಗಳು ಸೆಪ್ಟೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಬೇಕಿತ್ತು. ಆದುದರಿಂದ ೧೯೮೭-೮೮ನೇ ಸಾಲಿನ ಲಾಭ ನಷ್ಟದ ನಿಖರವಾದ ವಿವರಗಳು ಈಗ ಲಭ್ಯವಿಲ್ಲ.

ಅ) ಸಂಸೆ ಯು ಅನುಭವಿಸುತ್ತಿರುವ ನಷ್ಟವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನು? ಕೈಗೊಳ್ಳಲಾಗಿದೆ.

೧) ಚಾಲಕ ಮತ್ತು ನಿರ್ವಾಹಕರ ಕೆಲಸದ ನಿರೂಪಿತ ರೀತಿಯನ್ನು ಪುನರ್ರಚಿಸಿ ತನ್ಮೂಲಕ ಹೆಚ್ಚುವರಿ ಆದಾಯವನ್ನು ಗಳಿಸುವುದು.

೨) ಸುಧಾರಿತ ಕ್ರಮಗಳ ಮೂಲಕ ವಾಹನ ಸಂಚಾರ ಮಾರ್ಗಗಳಲ್ಲಿ ತನಿಖೆಗಳನ್ನು ನಡೆಸಿ ತನ್ಮೂಲಕ ಸಂಸ್ಥೆಯ ಆದಾಯವನ್ನು ಹೆಚ್ಚಿಸುವುದು.

೩) ವಾಹನ ಬಳಕೆಯನ್ನು ಹೆಚ್ಚು ಮಾಡುವುದರ ಮೂಲಕ ಪ್ರತಿ ಕಿ.ಮೀ.ಗೆ ತಗಲುತ್ತಿರುವ ಹಾಲಿ ವೆಚ್ಚವನ್ನು ನಿಯಂತ್ರಣಗೊಳಿಸಬಹುದು.

೪) ಇಂಧನದ ಬಳಕೆಯನ್ನು ನಿಗದಿಪಡಿಸುವುದರ ಮೂಲಕ ವೆಚ್ಚವನ್ನು ಕಡಿಮೆ ಮಾಡುವುದು, ಹಿನ್ನೊ ಇಂಜನ್‌ಗಳನ್ನು ಜೋಡಿಸಿದ ವಾಹನಗಳನ್ನು ಉಪಯೋಗಿಸುವುದರ ಮೂಲಕವೂ ಆಲ್ಯೂಮಿನಿಯಂನಿಂದ ಬಸ್ ಬಾಡಿಗಳನ್ನು ನಿರ್ಮಿಸಿ ವಾಹನದ ತೂಕವನ್ನು ಒಂದು ಟನ್ನಿನಷ್ಟು ಕಡಿಮೆ ಮಾಡಿ ತನ್ಮೂಲಕ ಇಂಧನ: ಟೈರುಗಳ ಮತ್ತು ಬಿಡಿ ಭಾಗಗಳ ಬಳಕೆಯನ್ನು ಮಿತವ್ಯಯಗೊಳಿಸಬಹುದು.

೫) ಸರಿಯಾದ ನಿಯಮಿತ ಪ್ರಮಾಣದಲ್ಲಿ ಹೊಸ ಹಾಗೂ ದುರಸ್ತಿ ಮಾಡಿದ ಟೈರುಗಳನ್ನು ವಾಹನಗಳಿಗೆ ಬಳಸುವುದರ ಮೂಲಕವೂ ಸುಧಾರಿತ ಕ್ರಮಗಳನ್ನು ಅಳವಡಿಸಿ ಟೈರುಗಳನ್ನು ರಿಟ್ರೇಡ್ ಮಾಡುವುದರ ಮೂಲಕ ಟೈರುಗಳ ಮೇಲಿನ ಖರ್ಚನ್ನು ಮಿತಗೊಳಿಸಬಹುದು.

೬) ವಾಹನದ ದುರಸ್ತಿ ಕಾರ್ಯವನ್ನು ಹೆಚ್ಚು ಸುಧಾರಿಸುವುದರ ಮೂಲಕ ವಾಹನ ಅಥವಾ ಯಂತ್ರಗಳ ವಿಫಲತೆಯ ಕಾರಣದಿಂದಾಗುವ ಸಂಚಾರ (ಟ್ರಿಪ್)ವನ್ನು ರದ್ದುಪಡಿಸುವ ಪ್ರಸಂಗಗಳನ್ನು ಸಾಧ್ಯವಾದಷ್ಟು ಮೊಟಕುಗೊಳಿಸುವುದು. ಪೂರೈ ಘಟ್ಟಗಳಲ್ಲಿ ನಡೆಯುತ್ತಿರುವ ವಾಹನ ದುರಸ್ತಿ ಮತ್ತು ಸುಧಾರಣೆಯನ್ನು ಎರಡೂ ಘಟ್ಟಗಳಿಗೆ ಸೀಮಿತಗೊಳಿಸಿ ವಾಹನ ದುರಸ್ತಿಯನ್ನು ಚುರುಕುಗೊಳಿಸುವುದು.

೭) ಸಂಸ್ಥೆಯ ಕಾರ್ಯಾಚರಣೆಯ ಎಲ್ಲಾ ಕಾರ್ಯ ನಿರ್ವಹಣಾ ಚಟುವಟಿಕೆಗಳ ಮೇಲೆ ಸೂಕ್ತ ನಿಗಾ ಇಡುವುದರ ಜೊತೆಗೆ ಪರಿಶೀಲಿಸಲು ಕ್ರಮ ತೆಗೆದುಕೊಳ್ಳುವುದು.

ರಾಜ್ಯದಲ್ಲಿ ನಡೆದ ಖಾಸಗೀ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳ ಬಗ್ಗೆ

೧೨೬೫. ಶ್ರೀ ಕೆ ಪ್ರತಾಪಚಂದ್ರಶೆಟ್ಟಿ (ಕುಂದಾಪುರ) — ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧ನೇ ಜನವರಿ ೧೯೮೭ರಿಂದ ೭ಬ್ರವರಿ ೧೯೮೮ರವರೆಗೆ ರಾಜ್ಯದಲ್ಲಿ ವಿವಿಧ ಖಾಸಗಿ ಸಂಸ್ಥೆಗಳ ಆಶ್ರಯದಲ್ಲಿ ನಡೆದ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳಿಂದ ತೊಂದರೆಗೊಳಗಾಗಿರುವ ಎಷ್ಟು ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿವೆ ?

ಆ) ಈ ಉಚಿತ ಶಿಬಿರಗಳನ್ನು ನಡೆಸುವಾಗ ಕೆಲವು ಪ್ರಾಥಮಿಕ ಅವಶ್ಯಕತೆಗಳ ಅಸ್ತಿತ್ವವನ್ನು ಇಲಾಖೆ ಮನಗಂಡು ಅವುಗಳನ್ನು ನಡೆಸಲು ಅನುಮತಿ ನೀಡುವುದೆ ?

ಇ) ಇಂತಹ ಶಿಬಿರಗಳಿಂದ ತೊಂದರೆಗೊಳಗಾದವರ ಸಂಖ್ಯೆ ಎಷ್ಟು ? ಹಾಗೂ ಸರ್ಕಾರ ನೀಡಿರುವ ಪರಿಹಾರ ವಿವರಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ದಿನಾಂಕ ೨೭-೧-೮೮ರಂದ ೨-೨-೮೮ರವರೆಗೆ ಚಿಂತಾಮಣಿಯಲ್ಲಿ ನಡೆದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ೭೧ ಪ್ರಕರಣಗಳು ತೊಂದರೆಗೊಡಾದವು.

ಆ) ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಶಿಬಿರ ನಡೆಸಲು ಅನುಮತಿ ನೀಡುವರು.

ಇ) ೭೧.

ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ತಲಾ ೧,೦೦೦ ರೂ-ಗಳಂತೆ ಪರಿಹಾರ ನೀಡಲಾಗಿದೆ.

ವಿಜಾಪುರ ಜಿಲ್ಲೆಯ ಸಚಿವದ್ವಯರ ಪ್ರವಾಸ

೧೨೫೯. ಶ್ರೀ ಬಾಬುರೆಡ್ಡಿ ಪಿ. ತಂಗಳ್ (ಇಂಡಿ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ವರ್ಷದ ಸಚಿವ ಸಂಪುಟದ ಪುನರ್ ರಚನೆಯ ನಂತರ ಈವರೆಗಿನ ಅವಧಿಯಲ್ಲಿ ಅರಣ್ಯ ರಾಜ್ಯ ಸಚಿವರು ಹಾಗೂ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರುಗಳು ಪಡೆದ ಪ್ರಯಾಣ ಭತ್ಯೆ ಎಷ್ಟು ?

ಆ) ಈ ಅವಧಿಯಲ್ಲಿ ಸಚಿವರುಗಳಿಬ್ಬರು ತಮ್ಮ ಸ್ವಂತ ಜಿಲ್ಲೆಗೆ ಎಷ್ಟು ಸಲ ಭೇಟಿ ನೀಡಿರುವರು.

ಇ) ಇದೇ ಅವಧಿಯಲ್ಲಿ ಅರಣ್ಯ ರಾಜ್ಯ ಸಚಿವರು ಎಷ್ಟು ಸಲ ಜಮಖಂಡಿಗೆ ಭೇಟಿ ನೀಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ. (ಮುಖ್ಯಮಂತ್ರಿಗಳು).—

ಅ) ಅರಣ್ಯ ರಾಜ್ಯ ಸಚಿವರು : ರೂ. ೧,೪೮ ೫೪೪-೦೦
ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು : ೯೭,೬೯೪-೦೦.

ಆ) ಅರಣ್ಯ ರಾಜ್ಯ ಸಚಿವರು : ೨೩ ಸಲ.
ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು : ೧೫ ಸಲ.

ಇ) ೨೩ ಸಲ.

ಅಧಿಕಾರಿಗಳನ್ನು ಭೇಟಿ ಮಾಡಲು ಶಾಸಕರಿಗೆ ಕಾಲಮಿತಿ.

೧೬೪೭. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡಲು ಶಾಸಕರಿಗೆ ಕಾಲಮಿತಿಯನ್ನು ವಿಗಧಿ ಮಾತಿರುವುದು ನಿಜವೆ ?

ಆ) ಶಾಸಕರು ಅಗತ್ಯವಾದ ಮಾಹಿತಿಯನ್ನು ಕೇಳಿದಾಗ ಕೊಡಬಾರದೆಂದು ಸರ್ಕಾರದವರು ಆದೇಶವನ್ನು ನೀಡಿದ್ದಾರೆಯೆ ?

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಶಾಸಕರು ಅಧಿಕಾರಿಗಳನ್ನು ಸಾರ್ವಜನಿಕ ಸಂದರ್ಶನದ ಸಮಯದಲ್ಲಿ ಅಥವಾ ಪೂರ್ವ ಸೂಚನೆ ನೀಡಿ ಯಾವಾಗಲಾದರೂ ಭೇಟಿ ಮಾಡಬಹುದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.